ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Saturday 9th March 1974/*Phalguna* 18, 1895 *S.E.*

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

STARRED QUSTIONS

(to which oral answers were given)

BUILDINGS FOR GOVERNMENT JUNIOR COLLEGES

13. Sri S. M. SHEERNALY CHANDRASHEKARA (Hosanagar).—

Will the Minister for Education be pleased to state :—

(*a*) whether Government has set up a machinery for constructing building for Government Junior Colleges in the State;

(*b*) if so, when the construction work of these colleges will be taken up;

(c) whether the Government is aware that there is a demand for the Construction of a building for Junior Collge at Anandapuram of Sagar Taluk;

(*d*) if so, the action the Government has taken in the matter ?

Sri M. MALLIKARJUNASWAMY (Minister for Education).

(*a*) No Separate machinery has been set up.

(*b*) Does not arise in view of reply to (*a*).

(*c*) Yes.

(*d*) In view of the economy Order, construction of buildings at the present juncture does not arise.

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ, ತಮ್ಮ ಉತ್ತರದಲ್ಲಿ 'ಮಿತವ್ಯಯ ಆದೇಶದಿಂದಾಗಿ ಈಗ ಕಟ್ಟಡಗಳ ನಿರ್ಮಾಣವನ್ನು ಕೈಕೊಳ್ಳುವ ಪ್ರಶ್ನೆ ಉದ್ಭವವಾಗುವುದಿಲ್ಲ' ಎಂದು ಹೇಳಿದ್ದೀರಿ. ತಮಗೆ ಗೊತ್ತಿರುವ ಹಾಗೆ, ಈ ವರ್ಷದ ಆಯುವ್ಯಯದೊಳಗೆ ಹೆಚ್ಚು ಕಡಿಮೆ 14 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಒದಗಿಸಲಾಗಿದೆ. ಆದುದರಿಂದ ಮಿತವ್ಯಯ ಎಂದು ಹೇಳುತ್ತೀರಿ, ನಿಜವಾಗಲೂ ಹಣವಿಲ್ಲದೆ ಮಿತವ್ಯಯ ಎಂದು ಹೇಳಿದ್ದೀರೋ, ಅಥವಾ ಹಣವಿದ್ದು ಮಿತವ್ಯಯ ಮಾಡಬೇಕು ಎನ್ನುವ ಉದ್ದೇಶದಿಂದ ಹೀಗೆ ಹೇಳಿದ್ದೀರೋ ಸ್ವಾಮಿ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ಆನಂದ ಪುರದಲ್ಲಿರತಕ್ಕ ಜೂನಿಯರ್ ಕಾಲೇಜಿಗೆ ಸಂಬಂಧಪಟ್ಟ ಪ್ರಶ್ನೆ. ಮಿತವ್ಯಯ ಈ ವರ್ಷಕ್ಕೆ ಅನ್ವಯಿಸತಕ್ಕದ್ದು, ಫೈನಾನ್ಷಿಯರ್ ಇಯರ್ ಎಂಡಿಂಗ್‌ನಲ್ಲಿ ಎಂದು ಉತ್ತರ ಕೊಟ್ಟಿದ್ದು. ಇದು ದೊಡ್ಡ ಪ್ರಶ್ನೆ. ಜೂನಿಯರ್ ಕಾಲೇಜುಗಳಿಗೆ ಕಟ್ಟಡಗಳನ್ನು ಒದಗಿಸುವುದು, ಅವರ ಜೊತೆಗೆ ಮುನಿಸಿಪಾಲಿಟಿ ತಾಲ್ಲೂಕು ಅಭಿವೃದ್ಧಿ ಮಂಡಲಗಳಿಗೆ ತೆಗೆದುಕೊಂಡಿರತಕ್ಕ ಹೈಸ್ಕೂಲುಗಳು ಇವೆಲ್ಲಕ್ಕೂ ಕಟ್ಟಡ ಒದಗಿಸಬೇಕಾಗಿದೆಯೆನ್ನುವುದು ಸರ್ಕಾರದ ಮುಂದೆ ಪರಿಶೀಲನೆಯಲ್ಲಿದೆ. ವಿಶಾಲ ದೃಷ್ಟಿಯಿಂದ ಒಂದು ಯೋಜನೆಯನ್ನು ತಯಾರುಮಾಡಿ ಪ್ರಾಶಸ್ತ್ಯ ಕೊಟ್ಟು, ಆ ಪ್ರಾಶಸ್ತ್ಯದ ಪ್ರಕಾರವಾಗಿ ಈ ಕೆಲಸಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಶ್ರೀರಾಮುಲು.—ಈ ಯೋಜನೆಯನ್ನು ತಾವು ಮಾಡುವಾಗ, ರಾಜ್ಯದ 19 ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಜೂನಿಯರ್ ಕಾಲೇಜಾಗಲಿ, ಪ್ರೌಢಶಾಲೆಯಾಗಲಿ ಅದಕ್ಕೆ ಸರ್ಕಾರಿ ಕಟ್ಟಡಗಳು ಇಲ್ಲವೋ ಅಂಥ ಕಡೆ ಒದಗಿಸಿಕೊಡುವುದಕ್ಕೆ ಸಮಿತಿ ನೇಮಕ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೆಲವು ಕಡೆ ಕಟ್ಟಡಗಳು ಇವೆ, ಇನ್ನು ಕೆಲವು ಕಡೆ ಕಟ್ಟಡಗಳು ಇಲ್ಲ. ಕಾಲೇಜುಗಳನ್ನು, ಸ್ಕೂಲುಗಳನ್ನು ಪ್ರಾರಂಭಮಾಡಬೇಕು ಎನ್ನತಕ್ಕಂಥ ಪ್ರಬಲವಾವ ಇಚ್ಛೆಯಿರುವಾಗ ಕಾಲೇಜು ಅಥವಾ ಶಾಲೆಗಳಿಗೆ ಉಪಕರಣಗಳು ಎಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯವಾಗಿ ಕಟ್ಟಡ ಸಹ ಇರಬೇಕು. ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಇದು ಬೃಹತ್ ಪ್ರಶ್ನೆ ಎಂದು ನಾನು ಹೇಳುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಜೂನಿಯರ್ ಕಾಲೇಜು ಮಾಡುವಾಗ ತಾಲ್ಲೂಕುಬೋರ್ಡ್, ಮುನಿಸಿಪಾಲಿಟಿ ಹೈಸ್ಕೂಲುಗಳನ್ನು ತೆಗೆದುಕೊಂಡಿರತಕ್ಕ ನಂದರ್ಭದಲ್ಲಿ ಅವರಿಗೆ ಷರತ್ತು ಹಾಕಿ ಎಲ್ಲಾ ಅನುಕೂಲಗಳನ್ನು ಕೊಡುವುದಾದರೆ ಕಾಲೇಜು ಕೊಡುತ್ತೇವೆ, ಇಲ್ಲದಿದ್ದರೆ ಕೊಡುವುದಿಲ್ಲ ಎಂದು ಈ ರೀತಿ ಕಂಡೀಷನ್ ಹಾಕಿದ್ದಾರೆಯೇ ? ಇದು ತಮಗೆ ಗೊತ್ತಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡಿರುತ್ತಾರೆ. ಅದಕ್ಕೆ ಕಾರಣವಾದರೂ ಇಷ್ಟೆ. ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳು ಸರಿಯಾದ ರೀತಿಯಲ್ಲಿ ಅವುಗಳನ್ನ ನಡೆಸಿಕೊಂಡು ಬರುವುದಕ್ಕೆ ಸಾಧ್ಯವಾಗಿಲ್ಲ. ಸೆಕೆಂಡರಿ ಶಿಕ್ಷಣ ಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಅದು ಅಬ್ಲಿಗೇಟರಿ ಡ್ಯೂಟಿ ಆವಾಗ್ಯೂ ಕೂಡ ಖಾಸಗೀ ಸಂಸ್ಥೆಗಳು ಕೂಡ ಅವನ್ನು ನಡೆಸಿಕೊಂಡು ಬರುತ್ತಿವೆ. ಷರತ್ತುಗಳನ್ನು ಹಾಕಿದ್ದಾಗ್ಯೂ ಕೂಡ ಅವುಗಳು ಬಹಳ ಮಟ್ಟಿಗೆ ವೈರೇಟ್ ಆಗುತ್ತಾ ಇರತಕ್ಕದ್ದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಜೂನಿಯರ್ ಕಾಲೇಜುಗಳನ್ನು ರಾಜ್ಯಾದ್ಯಂತ ಪ್ರಾರಂಭ ಮಾಡುವಾಗ ಯಾವುದಕ್ಕೆ ಸ್ಥಳವನತಿ ಇಪೆ, ಯಾವುದಕ್ಕೆ ಇಲ್ಲ ಎನ್ನತಕ್ಕದ್ದನ್ನು ಪರಿಶೀಲನೆಮಾಡಿ ಕೊಟ್ಟಿರಿ. ಎಷ್ಟು ಜೂನಿಯರ್ ಕಾಲೇಜುಗಳಿಗೆ ಸ್ಥಳವನತಿಗೆ ತೊಂದರೆಯಾಗುತ್ತಿದೆ, ಮತ್ತು ಎಷ್ಟು ಶಾಲೆಗಳಿಗೆ ಸ್ಥಳಾವಕಾಶಕ್ಕೆ ಅನುಕೂಲವಾಗಿದೆ.

ಅಧ್ಯಕ್ಷರು.—ಒಂದು ಪ್ರಶ್ನೆಯಲ್ಲಿ ೫ ಉಪ ಪ್ರಶ್ನೆ ಕೇಳಿದರೆ, ಒಂದಕ್ಕೇ ಉತ್ತರ ಕೊಡುವುದು;

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಎಷ್ಟು ಶಾಲೆಗಳಿಗೆ ಸ್ಥಳವನತಿ ಇದೆ, ಎಷ್ಟು ಶಾಲೆಗಳಿಗೆ ಇಲ್ಲ ಎನ್ನುವುದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಕೊಡಲಾಗುತ್ತದೆ.

Sri M. H. JAYAPRAKASH NARAYAN.—The Hon. Speaker might be quite aware that questions are put in an elaborate manner in the Parliament.

† Indicates t at the remarks or speeches have not been revised by the member concerned.

ಶ್ರೀ ಬಿ. ಬೈರಪ್ಪಾಜಿ.— ನಮ್ಮ ಸ್ವೀತಿಂದ ಸರ್ಕಾರದವರು ಜೂನಿಯರ್ ಕಾಲೇಜುಗಳನ್ನು ಪ್ರಾರಂಭಮಾಡಿದ್ದಾಗಿದೆ. ಪ್ರಾರಂಭ ಮಾಡಿದ ನಂತರ ಕಟ್ಟಡಗಳನ್ನು ಒದಗಿಸಿಕೊಡುವುದು ಖಾನಗೀ ಸಂಸ್ಥೆಯವರ ಮತ್ತು ಸರ್ಕಾರದ ಜವಾಬ್ದಾರಿ ಆಗಿದೆ. ಈ ಜವಾಬ್ದಾರಿಯನ್ನು ಆರಿತು ಇದನ್ನು ಬಗೆಹರಿಸತಕ್ಕ ಒಂದು ಮಾರ್ಗವನ್ನು ಕಂಡುಹಿಡಿದು, ಬ್ಯಾಂಕ್‌ಗಳ ಮೂಲಕ ಸಹಾಯ ಪಡೆದು ಅಥವಾ ಇನ್ನಾವುದಾದರೂ ಸಂಸ್ಥೆಗಳಿಂದ ಸಾಲ ಪಡೆದು, ಅದನ್ನು ತೀರಿಸತಕ್ಕ ವ್ಯವಸ್ಥೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆದಷ್ಟು ಬೇಗ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಸ್ವಾಮಿ ?

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅವರು ಪ್ರಶ್ನೆ ಕೇಳತಕ್ಕದ್ದು ನಿಮಗೆ ದೊಡ್ಡದಾಗಿ ಕಾಣುವುದಿಲ್ಲ.

ಅಧ್ಯಕ್ಷರು.—ನಾನಿದ್ದೇನೆ, ಯಾವುದು ದೊಡ್ಡದು ಎಂದು ಹೇಳುವುದಕ್ಕೆ.

Sri M. H. JAYAPRAKASH NARAYAN.—I am standing here and I know the consequences also.

MADAM SPEAKER.—I do not think that the hon. Member knows the consequences.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಸರ್ಕಾರದ ನೀತಿ ಪ್ರಕಾರ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಅತ್ಯಂತ ಅದ್ಯತೆಯನ್ನು ಕೊಡಲಾಗಿದೆ. ಪ್ರಥಮ ಆದ್ಯತೆಯನ್ನು ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಹೇಳತಕ್ಕ ಸೂಚನೆ ಬಹಳ ಸಾಧುವಾದುದು.

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ, ತಮಗೆ ಗೊತ್ತಿರುವ ಹಾಗೆ, ಇಡೀ ದೇಶದಲ್ಲಿ ಕಾಲೇಜುಗಳು ಪ್ರೌಢಶಾಲೆಗಳು ಮಧ್ಯಮವರ್ಗದ ಹೆಚ್ಚಿನ ಸೌಲಭ್ಯವಿರತಕ್ಕ ಜನಗಳ ಮಧ್ಯೆ ಇವೆ. ಕಾರಣಾಂತರದಿಂದ ಅವರು ದಾನ ಕೊಟ್ಟಿರುತ್ತಾರೆ, ಬಡವರು ಪ್ರೈವೇಟ್ ಸ್ಕೂಲ್‌ಗಳಲ್ಲಿ ಫೀಸ್ ಕೊಟ್ಟು ಓದುವುದಕ್ಕೆ ಸಾಧ್ಯವಿಲ್ಲ. ಅಂಥ ಕಡೆ ಆ ಕಟ್ಟಡಗಳಿಗೆ ತಾವು ಸ್ವಲ್ಪ ಹಣ ಒದಗಿಸಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ ರೀತಿ ಅದನ್ನು ಮಾಡುವುದಕ್ಕಾಗುವುದಿಲ್ಲ.

AFFORESTATION IN GULBARGA DISTRICT

35. Sri RAJA PID NAIK (Shorapur).—

Will the Minister for Food and Forests be pleased to state :—

(*a*) the area taken up for afforestation in Gulbarga District;

(*b*) the area taken up for afforestation in Shorapur taluk, Gulbarga District and kind of trees that are planted in this area;

(*c*) The staff provided for development of forest in Shorapur Taluk ?

Sri K. H. PATIL (Minister for Food and Forests).—

(*a*) 16,522 acres or 6574.888 Hectares.

(*b*) 50 acres or 20.20 Hectares.

Kinds of trees planted

Tamarind, Sisoo and Eucalyptus.

Seeds Sown

Babul, Hulgul, Neem, Albizzia etc.